# ಕರ್ನಾಟಕ ಸರ್ಕಾರದ ನಡವಳಿಗಳು

ಇಂಧನ ಇಲಾಖೆ 2020 ದಿನಾಂಕ 22/10/2020 ಬೆಂಗಳೂರು

ವಿಷಯ : ಮೆ|| PSG Energy Private Limited ರವರಿಗೆ ಕೊಪ್ಪಳ ಜಿಲ್ಲೆಯ ಯಲಬುರ್ಗಾ ಮತ್ತು ಕುಷ್ಟಗಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ 14 ಮೆ. ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಸರ್ಕಾರದ ಹಂಚಿಕೆ ಆದೇಶ ನೀಡುವ ಕುರಿತು.

**ಓದಲಾಗಿದೆ :** 1) ಹಂಚಿಕೆ ಸಮಿತಿ ಸಭೆ ದಿನಾಂಕ:13.11.2018
2) ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ರವರ ಪತ್ರ ಸಂಖ್ಯೆ:ಕೆಆರ್‌ಇಡಿ/08/PSG-14MW/ 2020/3426 ದಿನಾಂಕ:14.09.2020.

**ಪ್ರಸ್ತಾವನೆ :-**

ಮೇಲೆ ಓದಲಾದ (1)ರ ಹಂಚಿಕೆ ಸಮಿತಿ ಸಭೆಯಲ್ಲಿ ಮೆ:PSG Energy Private Limited ರವರಿಗೆ ಕೊಪ್ಪಳ ಜಿಲ್ಲೆಯ ಯಲಬುರ್ಗಾ ಮತ್ತು ಕುಷ್ಟಗಿ ತಾಲ್ಲೂಕಿನ ಮೈದನೇರಿ, ವಟ್‌ಪರ್ವಿ, ಸಿದ್ದಗನಹಳ್ಳಿ, ಚಿಕ್ಕಮುಕ್ಕಿ, ಕುದರಿಮುಖಿ, ವೆಂಕಬೊಗುದಿ, ಹೊಸ್ಗಾಲ್, ಮುಸ್ಲಾಪುರ್, ರಾಂಪುರ್, ಹಿರೆಸೂಲಿಕೇರಿ, ಅರಸಿಕೆರೆ, ರಾಮದುರ್ಗ, ಗಡ್ಲಕಮಲಾಪುರ್, ಹೊಸೂರ್, ಚಾಮಲಾಪುರ, ಕೂಡದಹಾಲ್, ಚನ್ನಹಾಲ್ ಮತ್ತು ಎಲ್ಮಗಿರಿ ಗ್ರಾಮಗಳಲ್ಲಿ 14 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಸ್ಥಳವು ಖಾಸಗಿ ಜಮೀನಾಗಿದ್ದು, ಎರಡು ವರ್ಷದಲ್ಲಿ ವಾಸ್ತವಿಕ ಸಾಮರ್ಥ್ಯಕ್ಕೆ ವಿಸ್ತೃತ ಯೋಜನಾ ವರದಿಯನ್ನು ತಯಾರಿಸಿ, ಕ್ರೆಡಲ್‌ಗೆ ಸಲ್ಲಿಸುವ ಷರತ್ತಿಗೊಳಪಟ್ಟು ತತ್ವಶ: ಅನುಮೋದನೆ ನೀಡಿರುತ್ತದೆ.

ಮೇಲೆ ಓದಲಾದ (2)ರ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕೆ.ಆರ್.ಇ.ಡಿ.ಎಲ್. ಇವರು ದಿನಾಂಕ:13.11.2018ರ ಹಂಚಿಕೆ ಸಮಿತಿಯು ಅನುಮೋದಿಸಿರುವಂತೆ ತತ್ವಶ: ಅನುಮೋದನೆ ಪತ್ರವನ್ನು ನೀಡಿರುವುದಿಲ್ಲ. ಆದರೆ ಅಭಿವೃದ್ಧಿದಾರರು 14 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯ ಕುರಿತು ಡಿಪಿಆರ್ ತಯಾರಿಸಿ, ಕ್ರೆಡಲ್‌ಗೆ ಸಲ್ಲಿಸಿರುವುದಾಗಿ ಹಾಗೂ ಆ ಸಂಬಂಧ ಡಿಪಿಆರ್ ಶುಲ್ಕ ರೂ.16,52,000/- ಗಳನ್ನು ಪಾವತಿಸಿಕೊಂಡಿರುವುದಾಗಿ ತಿಳಿಸುತ್ತಾ, ಸದರಿ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ಕೆಪಿಟಿಸಿಎಲ್‌ನೊಂದಿಗೆ ವೀಲಿಂಗ್ ಒಡಂಬಡಿಕೆ ಮಾಡಿಕೊಳ್ಳುವ ಮೂಲಕ ಮೂರನೇ ವ್ಯಕ್ತಿಗೆ ಮಾರಾಟ ಮಾಡಲು ಅನುಮತಿಸಿ, ತಾಂತ್ರಿಕ ಮಾಹಿತಿಯೊಂದಿಗೆ ಮೆ.PSG Energy Private Limited ರವರಿಗೆ ಕೊಪ್ಪಳ ಜಿಲ್ಲೆಯ ಯಲಬುರ್ಗಾ ಮತ್ತು ಕುಷ್ಟಗಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ 14 ಮೆ.ವ್ಯಾ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗೆ ಹಂಚಿಕೆ ಆದೇಶ ನೀಡಬಹುದೆಂಬ ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

**Geographical area description for 14 MW capacity wind power project**

| Proposed capacity in MW | Village/Taluk/District | Geographical area description of the project |
|---|---|---|
| 14 MW (07 Nos X 2000 kW) | Mydaneri, Watparvi, Sidganhalli, Chikamuki & Kudrimuki<br><br>Chamalapura, Kodadahalu, Chennahalu and Yemagiri<br><br>Venkabogudi, Hasgal, Muslapur, Rampur, Hiresulikeri, Arsinakeri, Ramdurg, Gudlakmapur & Hosur villages of Yelburga and Kustagi taluks, Koppal District. | The identified area is covered by Private land. The area is having several peaks and is covered in the following Geographical co-ordinates as:<br>**Part A:57 A/2**<br>A:Latitude: 15°30'0"N, Longitude: 76°11'34.72''E<br>B:Latitude: 15°30'37.08"N, Longitude: 76°11'38.00''E<br>C:Latitude: 15°30'38.98"N, Longitude: 76°12'8.96''E<br>D:Latitude:15°33'41.47"N, Longitude: 76°12'12.09''E<br>E:Latitude:15°33'43.02"N, Longitude: 76°15'0''E<br>F:Latitude:15°30'0"N, Longitude: 76°15'0''E<br>**Peaks:** 632 and 646 m AMSL |

Wind Sectior
vard No. 407
Date: 23-10-2020
Sig.

| | | |
|---|---|---|
| | | **Part B:57 A/3**<br><br>A:Latitude: 15°27'11.91"N, Longitude: 76°11'15.28"E<br>B:Latitude: 15°30'0"N, Longitude: 76°11'14.46"E<br>C:Latitude: 15°30'0"N, Longitude: 76°15'0"E<br>D:Latitude:15°27'11.41"N, Longitude: 76°15'0"E<br>**Peaks:** 589, 632 and 640 m AMSL<br><br>**Part C:57 A/6**<br><br>A:Latitude: 15°30'0"N, Longitude: 76°15'0"E<br>B:Latitude: 15°32'30.40"N, Longitude: 76°15'0"E<br>C:Latitude: 15°32'35.19"N, Longitude: 76°21'31.5"E<br>D:Latitude:15°30'0"N, Longitude: 76°21'37.04"E<br>**Peaks:** 680, 633, 656, 621, 677, 658 and 684 m AMSL |
| **14 MW** | | |

ಪ್ರಸ್ತಾವನೆ ಪರಿಶೀಲಿಸಿ, ಸರ್ಕಾರದ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಎನರ್ಜಿ 179 ಎನ್‌ಸಿಇ 2020**
**ಬೆಂಗಳೂರು, ದಿನಾಂಕ :20/10/2020.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಮೆ|| PSG Energy Private Limited ರವರಿಗೆ ಕೊಪ್ಪಳ ಜಿಲ್ಲೆಯ ಯಲಬುರ್ಗಾ ಮತ್ತು ಕುಷ್ಟಗಿ ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ 14 ಮೆ.ವ್ಯಾ. ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಯನ್ನು ಈ ಕೆಳಕಂಡ ಷರತ್ತು ಹಾಗೂ ಶೆಡ್ಯೂಲ್‌ನಲ್ಲಿರುವಂತೆ ಹಂಚಿಕೆ ಮಾಡಿ ಆದೇಶಿಸಿದೆ.

**Geographical area description for 14 MW capacity wind power project**

| Proposed capacity in MW | Village/Taluk/District | Geographical area description of the project |
|---|---|---|
| 14 MW (07 Nos X 2000 kW) | Mydaneri, Watparvi, Sidganhalli, Chikamuki & Kudrimuki<br><br>Chamalapura, Kodadahalu, Chennahalu and Yemagiri<br><br>Venkabogudi, Hasgal, Muslapur, Rampur, Hiresulikeri, Arsinakeri, Ramdurg, Gudlakmapur & Hosur villages of Yelburga and Kustagi taluks, Koppal District. | The identified area is covered by Private land. The area is having several peaks and is covered in the following Geographical co-ordinates as:<br>**Part A:57 A/2**<br>A:Latitude: 15°30'0"N, Longitude: 76°11'34.72"E<br>B:Latitude: 15°30'37.08"N, Longitude: 76°11'38.00"E<br>C:Latitude: 15°30'38.98"N, Longitude: 76°12'8.96"E<br>D:Latitude:15°33'41.47"N, Longitude: 76°12'12.09"E<br>E:Latitude:15°33'43.02"N, Longitude: 76°15'0"E<br>F:Latitude:15°30'0"N, Longitude: 76°15'0"E<br>**Peaks:** 632 and 646 m AMSL |

| | | |
|---|---|---|
| | | **Part B:57 A/3**<br><br>**A**:Latitude: 15°27'11.91"N, Longitude: 76°11'15.28''E<br>**B**:Latitude: 15°30'0"N, Longitude: 76°11'14.46''E<br>**C**:Latitude: 15°30'0"N, Longitude: 76°15'0''E<br>**D**:Latitude:15°27'11.41"N, Longitude: 76°15'0''E<br>**Peaks:** 589, 632 and 640 m AMSL<br><br>**Part C:57 A/6**<br><br>**A**:Latitude: 15°30'0"N, Longitude: 76°15'0''E<br>**B**:Latitude: 15°32'30.40"N, Longitude: 76°15'0''E<br>**C**:Latitude: 15°32'35.19"N, Longitude: 76°21'31.5''E<br>**D**:Latitude:15°30'0"N, Longitude: 76°21'37.04''E<br>**Peaks:** 680, 633, 656, 621, 677, 658 and 684 m AMSL |
| **14 MW** | | |

**ಷರತ್ತುಗಳು:-**

1. ಈ ಆದೇಶ ಹೊರಡಿಸಿದ ದಿನಾಂಕದಿಂದ 45 ದಿನಗಳ ಒಳಗಾಗಿ ಸರ್ಕಾರದ ಆದೇಶ ಸಂಖ್ಯೆ:ಇಎನ್ 435 ಎನ್‌ಸಿಇ 2011, ದಿನಾಂಕ :06.1.2012ರನ್ವಯ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದೊಂದಿಗೆ ನಿಯಮಾನುಸಾರ ಒಡಂಬಡಿಕೆ ಮಾಡಿಕೊಳ್ಳತಕ್ಕದ್ದು.
2. ಅಭಿವೃದ್ಧಿದಾರರು ಈ ಯೋಜನೆಯನ್ನು ಸರ್ಕಾರದ ಆದೇಶ ಸಂಖ್ಯೆ:ಇಎನ್ 354 ಎನ್‌ಸಿಇ 2008, ದಿನಾಂಕ:19.01.2010 ಹಾಗೂ ತಿದ್ದುಪಡಿ ಆದೇಶ ಸಂಖ್ಯೆ:ಇಎನ್ 07 ಎನ್‌ಸಿಇ 2011, ದಿನಾಂಕ: 18.07.2011ರಲ್ಲಿ ನಿಗದಿಪಡಿಸಿರುವ ಅವಧಿಯೊಳಗಾಗಿ ಅನುಷ್ಠಾನಗೊಳಿಸತಕ್ಕದ್ದು.
3. ಅಭಿವೃದ್ಧಿದಾರರು ತಾಂತ್ರಿಕ ಅವಶ್ಯಕತೆ ಮತ್ತು ಹೆಚ್ಚಿನ ವಿದ್ಯುತ್ ಉತ್ಪಾದನೆಯನ್ನು ಸೇಫ್‌ನಕ್ಷೆ ಮತ್ತು ವಿಂಡ್ ಫಾರ್ಮನ ಲೇಔಟ್‌ನ ಬದಲಾವಣೆಗನುಗುಣವಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ಶಿಫಾರಸ್ಸಿನಂತೆ ಇದೆ ಎಂಬುದನ್ನು ಖಾತರಿಪಡಿಸಬೇಕು.
4. ಮೈಲುಗಲ್ಲುಗಳನ್ನು ತೋರಿಸುವ ಪರ್ಟ್ ನಕ್ಷೆಯನ್ನು ತಯಾರಿಸಿ ಮೇಲುಸ್ತುವಾರಿಗಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸಲ್ಲಿಸಬೇಕು.
5. ಎಲ್ಲೆಲ್ಲಿ ಶಾಸನಬದ್ಧ ಅನುಮೋದನೆ ಅವಶ್ಯಕತೆಯಿದೆಯೋ ಅಂದರೆ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ/ಕಂದಾಯ ಇಲಾಖೆಗಳ ಮತ್ತು ಇತರ ಸಂಬಂಧಿತ ಇಲಾಖೆಗಳಿಂದ ಅನುಮೋದನೆಯನ್ನು ಹಂಚಿಕೆದಾರರು ಪಡೆದುಕೊಳ್ಳತಕ್ಕದ್ದು. ಅಭಿವೃದ್ಧಿದಾರರು ಈ ಯೋಜನೆಯನ್ನು ಖಾಸಗಿ ಜಮೀನಿನಲ್ಲಿ ಅನುಷ್ಠಾನಗೊಳಿಸುತ್ತಿದ್ದು, ಖಾಸಗಿ ಜಮೀನಿನ ಮಾಲೀಕರಿಂದ ಒಪ್ಪಿಗೆ ಪತ್ರವನ್ನು ಪಡೆಯತಕ್ಕದ್ದು.
6. ಅಭಿವೃದ್ಧಿದಾರರು ಈ ಯೋಜನೆಯಿಂದ ಉತ್ಪಾದಿಸುವ ವಿದ್ಯುತ್ತನ್ನು ಮೂರನೇ ವ್ಯಕ್ತಿಗೆ ಮಾರಾಟ ಮಾಡುವ ಅಥವಾ ಸ್ವಂತ ಬಳಕೆಗೆ ಉಪಯೋಗಿಸಿಕೊಳ್ಳಲು ಅನುಮತಿಸಲಾಗಿದೆ. ಈ ಕುರಿತು ಕೆ.ಪಿ.ಟಿ.ಸಿ.ಎಲ್/ಎಸ್ಕಾಂನೊಂದಿಗೆ ವೀಲಿಂಗ್ ಒಡಂಬಡಿಕೆ ಮಾಡಿಕೊಳ್ಳಲು ಅನುಮತಿಸಲಾಗಿದೆ.

...4

7. ಯೋಜನೆಯನ್ನು ತ್ವರಿತವಾಗಿ ಅನುಷ್ಠಾನ ಮಾಡಲು ಅನುವಾಗುವಂತೆ ರಾಜ್ಯ ಮತ್ತು ಜಿಲ್ಲಾ ಮಟ್ಟದ ಸರ್ಕಾರಿ ಅಧಿಕಾರಿಗಳು ಸಹಕರಿಸುವುದು.
8. ಸದರಿ ಪವನ ವಿದ್ಯುತ್ ಯೋಜನೆಗಾಗಿ ಇಂಧನ ಇಲಾಖೆಯಿಂದ ಜಮೀನನ್ನು ಹಂಚಿಕೆ ಮಾಡಲಾಗುವುದಿಲ್ಲ ಹಾಗೂ ಈ ಹಂಚಿಕೆ ಆದೇಶವು ಪವನ ವಿದ್ಯುತ್ ಯೋಜನೆಯ ಸಾಮರ್ಥ್ಯದ ಹಂಚಿಕೆಗೆ ಮಾತ್ರ ಸೀಮಿತವಾಗಿದೆ ಹಾಗೂ ಅಭಿವೃದ್ಧಿದಾರರಿಗೆ ಯೋಜನೆಯ ಜಾಗದಲ್ಲಿಯ ಖನಿಜ ಸಂಪತ್ತು ಹಾಗೂ ಭೂಮಿಯ ಬಗ್ಗೆ ಯಾವುದೇ ಹಕ್ಕು ಇರುವುದಿಲ್ಲ ಎಂಬುದನ್ನು ಮನಗಾಣತಕ್ಕದ್ದು.
9. ಸದರಿ ಕಂಪನಿಯವರು ಯೋಜನೆಗೆ ಸಂಬಂಧಿಸಿದಂತೆ ಬಾಕಿ ಇರುವ ಡಿಪಿಆರ್ ಮೊತ್ತ ಹಾಗೂ ಇನ್ನಿತರೆ ಶುಲ್ಕಗಳನ್ನು ಒಡಂಬಡಿಕೆ ಮಾಡಿಕೊಳ್ಳುವ ಮುನ್ನ ಕೆ.ಆರ್.ಇ.ಡಿ.ಎಲ್.ಗೆ ಸಂದಾಯ ಮಾಡತಕ್ಕದ್ದು.
10. ಕರ್ನಾಟಕ ಭೂಸುಧಾರಣಾ ಕಾಯ್ದೆ 1961 ಕಲಂ 109 ರಡಿ ಕಂದಾಯ ಇಲಾಖೆಯಿಂದ ಅನುಮತಿ ಪಡೆದುಕೊಂಡು ಭೂ ಪರಿವರ್ತನೆಯಾದ ನಂತರವೇ ಕೃಷಿ ಜಮೀನನ್ನು ಕೃಷಿಯೇತರ ಉದ್ದೇಶಕ್ಕಾಗಿ ಬಳಕೆ ಮಾಡಿಕೊಳ್ಳತಕ್ಕದ್ದು.
11. ಈ ಯೋಜನೆಗೆ ಸರ್ಕಾರದ ಕೈಗಾರಿಕಾ ನೀತಿ 2014-19ರನ್ವಯ ಅನ್ವಯಿಸುವ ಸವಲತ್ತುಗಳು ಲಭ್ಯವಾಗುತ್ತವೆ.

ಈ ಆದೇಶವನ್ನು ರದ್ದು ಮಾಡುವ/ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

N. Mangalagowri 20/10/2020
(ಎನ್.ಮಂಗಳಗೌರಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.
20/10/20

**ಇವರಿಗೆ :**

ಸಂಕಲನಕಾರರು, ರಾಜ್ಯ ಪತ್ರ, ಸರ್ಕಾರಿ ಮುದ್ರಣಾಲಯ, ಬೆಂಗಳೂರು ಇವರಿಗೆ ಪ್ರಕಟಣೆಗಾಗಿ.

**ಪ್ರತಿ :**

1. ಮಾನ್ಯ ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿ / ಕಾರ್ಯದರ್ಶಿ / ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ/ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ವಿಜ್ಞಾನ ಇಲಾಖೆ/ ಕಂದಾಯ ಇಲಾಖೆ/ಬಹುಮಹಡಿ ಕಟ್ಟಡ/ವಿಕಾಸಸೌಧ, ಬೆಂಗಳೂರು-1.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರು.
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು
5. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ, 18ನೇ ಕ್ರಾಸ್, ಮಲ್ಲೇಶ್ವರ, ಬೆಂಗಳೂರು.
6. ಜಿಲ್ಲಾಧಿಕಾರಿಗಳು, ಕೊಪ್ಪಳ ಜಿಲ್ಲೆ, ಕೊಪ್ಪಳ.
7. ಉಪ ಅರಣ್ಯ ಸಂರಕ್ಷಣಾಧಿಕಾರಿ, ಕೊಪ್ಪಳ ಜಿಲ್ಲೆ, ಕೊಪ್ಪಳ.
8. ವ್ಯವಸ್ಥಾಪಕ ನಿರ್ದೇಶಕರು, ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ, ಕಲಬುರಗಿ.
9. M/s PSG Energy Private Limited, VSS Nandadeep, Flat No.801, 8th Floor, Near Medchal RTO Office, Kompally Road, Medchal District, Hyderabad-500067.
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಹಿರಿಯ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ.
11. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.
12. ಶಾಖಾ ರಕ್ಷಾ ಕಡತ/ಕಛೇರಿ ಪ್ರತಿ/ ಹೆಚ್ಚುವರಿ ಪ್ರತಿಗಳು.